ಶ್ರೀ ಡಿ. ಮಂಜುನಾಥ್.—ಅಲ್ಲಿ ಸರ್ಕಾರಿ ಜಾಗ ಇದ್ದರೂ ಸಹ ಅದು ಗೋಮಾಳ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಈಗಾಗಲೇ ಕರೆಸ್‌ಪಾಂಡೆನ್ಸ್ ಆಗಿರುತ್ತಿದೆ. ಅದು ತಹಶೀಲ್ದಾರ್, ಜಿಲ್ಲಾಧಿಕಾರಿಯವರಿಗೆ ಹೋಗಿದೆ. ಅಲ್ಲಿ ಸರ್ಕಾರಿ ಜಾಗ ಇದ್ದರೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ಮನೋರಮ ಸಿದ್ಧರಾಜ್.—ಅದು ಗೋಮಾಳದ ಜಾಗ ಅಲ್ಲ. ಅಲ್ಲಿ ಬೇಕಾದಷ್ಟು ಜನ ಮನೆ ಕಟ್ಟಿಸಿಕೊಂಡಿದ್ದಾರೆ. ಆ ಜಾಗವನ್ನು ಮಕ್ಕಳಹೆಸರಿಗೆ ಬರೆದುಕೊಡುವಂಥಾದ್ದು ಏನೂ ಇಲ್ಲ, ಮಕ್ಕಳ ಆಟಕ್ಕೋಸ್ಕರ ಅವಕಾಶ ಮಾಡಿಕೊಡುವುದು ಇದೆ. ಅದು ಶಾಲೆಗೆ ಸೇರಿದ್ದ ಜಾಗ.

ಶ್ರೀ ಡಿ. ಮಂಜುನಾಥ್.—ಶಾಲೆಯ ಜಾಗ ಇದ್ದರೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀಮತಿ ಮನೋರಮ ಸಿದ್ಧರಾಜ್.—ಆ ಶಾಲೆಗೆ ಕೊಟ್ಟು ಆಗಿದೆ.

ಶ್ರೀ ಡಿ. ಮಂಜುನಾಥ್.—ಶಾಲೆಯ ಜಾಗ ಇದ್ದರೆ ತೊಂದರೆ ಇಲ್ಲ. ಆದನ್ನು ವಶಕ್ಕೆ ತೆಗೆದು ಕೊಳ್ಳುವುದಕ್ಕೆ ಡಿ. ಸಿ. ಮತ್ತು ಎ. ಸಿ. ಅವರಿಗೆ ಕರೆಸ್‌ಪಾಂಡೆನ್ಸ್ ಮಾಡಿದ್ದೇವೆಂದು ಮಾಹಿತಿ ಕಳುಹಿಸಿದ್ದಾರೆ. ಆದ್ದರಿಂದ, ಅದರ ಬಗ್ಗೆ ನಾನೇ ಖುದ್ದು ವಿಚಾರಿಸುತ್ತೇನೆ.

ಕರ್ನಾಟಕ ಕೃಷಿ ಕೈಗಾರಿಕಾ ನಿಗಮದವರಿಂದ ಪಂಪ್‌ಸೆಟ್ಟುಗಳ ಖರೀದಿ

೧೯೭. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಕೃಷಿ ಕೈಗಾರಿಕಾ ನಿಗಮದವರು ಸಬ್‌ಮರ್ಸಿಬಲ್ ಪಂಪ್‌ಸೆಟ್ಟುಗಳನ್ನು ಖರೀದಿ ಸುತ್ತಿರುವ ಕಂಪನಿಯಾ ಹೆಸರೇನು ? ಹಾಗೂ ಈವರೆಗೆ ಈ ಕಂಪನಿಯಿಂದ ಕೊಂಡಿರುವ ಪಂಪ್ ಸೆಟ್ಟುಗಳ ಸಂಖ್ಯೆ ಎಷ್ಟು ?

ಆ) ಈ ಬಗ್ಗೆ ಏನಾದರೂ ಟೆಂಡರ್ ಕರೆದು ಕೊಟೇಶನ್ ಪಡೆದಿದ್ದಾರೆಯೆ ?

ಇ) ಹಾಗಿದ್ದಲ್ಲಿ ಆ ಕಂಪನಿಗಳ ಹೆಸರುಗಳೇನು? ಆ ಪೈಕಿ ಕಡಿಮೆ ಟೆಂಡರ್ ಕೊಟ್ಟಿರುವ ಕಂಪನಿ ಹೆಸರೇನು ?

ಈ) ಕಡಿಮೆ ಕೊಟೇಶನ್ ಕೊಟ್ಟಿರುವ ಕಂಪನಿಗೆ ಆರ್ಡರ್ ಕೊಡದಿರಲು ಕಾರಣವೇನು ? ಇದರಿಂದ, ರೈತರ ಮೇಲೆ ಹೊರೆ ಆಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕಾ ರಾಜ್ಯ ಸಚಿವರು).—

ಅ) ಕಂಪನಿಗಳ ಹೆಸರು ಮತ್ತು ೧೯೮೬-೮೭ರಲ್ಲಿ ಖರೀದಿಸಿರುವ ಪಂಪುಸೆಟ್ಟುಗಳ ಸಂಖ್ಯೆ ಈ ಕೆಳಕಂಡಂತಿವೆ.—

ಕ್ರಮ ಸಂಖ್ಯೆ	ಫರ್ಮಿನ ಹೆಸರು	ಕೊಂಡ ಪಂಪ್ ಸೆಟ್ಟುಗಳ ಸಂಖ್ಯೆ
೧	ಪ್ರೊಟೆಕ್ಟೋ ಇಂಜಿನಿಯರಿಂಗ್ ಕಾರ್ಪೊರೇಷನ್ ಲಿಮಿಟೆಡ್	೧,೧೨೯
೨	ದೀಪಿಕಾ ಎಂಟರ್‌ಪ್ರೈಸಸ್	೨೨
೩	ಎಂ.ಬಿ ಪೆಚ್. ಪಂಪ್ಸ್ ಪ್ರೈ. ಲಿಮಿಟೆಡ್	೧೦
೪	ಕರ್ನಾಟಕ ಸ್ಮಾಲ್ ಇಂಡಸ್ಟ್ರೀಸ್ ಮಾರ್ಕೆಟಿಂಗ್ ಕಾರ್ಪೊರೇಷನ್ ಲಿ.	೩
೫	ಬಜಾಜ್ ಎಲೆಕ್ಟ್ರಿಕಲ್ಸ್ ಲಿ.	೩
	ಒಟ್ಟು	೧,೧೬೭

ಅ) ಹೌದು.

ಇ) ಕರ್ನಾಟಕ ಕೃಷಿ ಕೈಗಾರಿಕಾ ನಿಗಮ ಇವರು ಕರೆದಿದ್ದ ಟೆಂಡರ್‌ಗೆ ಉತ್ತರಿಸಿದ ಕಂಪನಿಗಳ ಹೆಸರನ್ನು ಅನುಬಂಧ (೧)ರಲ್ಲಿ ಲಗತ್ತಿಸಲಾಗಿದೆ. ಪ್ರತಿಯೊಂದು ಗುರುತಿಸಿದ ಪಂಪುಸೆಟ್ಟುಗಳಿಗೆ ತುಂಬಾ ರೀತಿಯ ಅಶ್ವ ಶಕ್ತಿ ಮತ್ತು ಹಂತಗಳು ಇರುತ್ತವೆ ಒಟ್ಟಾರೆಯಾಗಿ ಗುರುತಿಸಿದ ಒಂದು ಪಂಪುಸೆಟ್ಟಿಗೆ ೩೦ ರಿಂದ ೪೦ರವರೆಗೆ ಬೇರೆ ಬೇರೆ ಪರ್ಯಾಯಗಳಿರುತ್ತವೆ. ಪ್ರತಿಯೊಂದಕ್ಕೂ ಕೂಡ ಅದರದೇ ಬೆಲೆ ಇರುತ್ತದೆ ಇದರ ಜೊತೆಗೆ ಪ್ರತಿ ಅಶ್ವ ಶಕ್ತಿಯ ಮತ್ತು ಹಂತಕ್ಕೆ ಸಂಬಂಧಿಸಿದಂತೆ ಎಫಿಸಿಯೆನ್ಸಿ ಬೇರೆ ಬೇರೆ ಗುರುತಿಸಿದ ಪಂಪುಸೆಟ್ಟುಗಳಿಗೆ ಬೇರೆ ಬೇರೆಯಾಗಿರುತ್ತದೆ. ಆದುದರಿಂದ ಅವುಗಳನ್ನು ಹೊಂದಾಣಿಕೆ ಮಾಡುವುದಕ್ಕಾಗುವುದಿಲ್ಲ. ಮಾರಾಟದ ದರ ರೈತರಿಗೆ ತಿಳಿದಿರುತ್ತದೆ. ಕೋರಿಕೆ ಕಳುಹಿಸಿದ ಸಂಸ್ಥೆಗಳು ಅಂದರೆ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳು ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಕಾರ್ಪೋರೇಶನ್ ತಮಗೆ ಬೇಕಾದ ಬ್ರಾಂಡ್‌ಗಳನ್ನು ಆರಿಸಿಕೊಳ್ಳುತ್ತಾರೆ.

ಈ) 'ಇ' ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಅನುಬಂಧ–೧

ಕ್ರಮ ಸಂಖ್ಯೆ		ಫರ್ಮ್‌ನ ಹೆಸರು
೧	ಮೆಸ್ಸರ್	ಪ್ರೊಟೆಕ್ಟೋ ಇಂಜಿನಿಯರಿಂಗ್ ಕಾರ್ಪೋರೇಷನ್ ಲಿ.
೨	—	ಎಂ.ಬಿ.ಹೆಚ್. ಪ್ರೈವೇಟ್ ಲಿಮಿಟೆಡ್
೩	—	ಖಜಾಜ್ ಎಲೆಕ್ಟ್ರಿಕಲ್ಸ್ ಲಿಮಿಟೆಡ್.
೪	—	ಶಾಂತ ಮಾರ್ಕೆಟಿಂಗ್ ಎಂಟರ್‌ಪ್ರೈಸಸ್.
೫	—	ಭೈರವಿ ಪಂಪ್ಸ್ ಪ್ರೈವೇಟ್ ಲಿಮಿಟೆಡ್.
೬	—	ಪುಲ್ಲನ್ ಪಂಪ್ಸ್ ಇಂಡಸ್ಟ್ರೀಸ್.
೭	—	ದೇಶಿಕಾರ್ ಇಂಟರ್‌ನ್ಯಾಷನಲ್.
೮	—	ಕರ್ನಾಟಕ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಮಾರ್ಕೆಟಿಂಗ್ ಕಾರ್ಪೋರೇಷನ್ ಲಿಮಿಟೆಡ್.
೯	—	ಶ್ರೀ ಶ್ರೀನಿವಾಸ ಪಾಂಡರಿ.
೧೦	—	ಬಾಲಾಜಿ ವಾಟರ್ ಪಂಪ್ಸ್ ಪ್ರೈವೇಟ್ ಲಿಮಿಟೆಡ್.
೧೧	—	ಉದಯಕೃಷ್ಣಾ ಇಂಜಿನಿಯರಿಂಗ್ ವರ್ಕ್ಸ್.
೧೨	—	ಟೊಯೋಮಾ ಎಲೆಕ್ಟ್ರಿಕ್ ಪ್ರೈವೇಟ್ ಲಿಮಿಟೆಡ್.
೧೩	—	ಮೋನಾರ್ಕ್ ಸಬ್‌ಮರ್ಸಿಬಲ್ ಪಂಪ್ಸ್ ಪ್ರೈವೇಟ್ ಲಿಮಿಟೆಡ್.
೧೪	—	ಪ್ರಕಾಶ್ ಇಂಜಿನಿಯರಿಂಗ್ ಎಂಟರ್‌ಪ್ರೈಸಸ್.
೧೫	—	ಇಂಡಿಯಾ ಎಲೆಕ್ಟ್ರಿಕಲ್ ಅಂಡ್ ಇಂಜಿನಿಯರಿಂಗ್ ಕಂಪನಿ.
೧೬	—	ವರ್ಷ ಎಂಟರ್‌ಪ್ರೈಸಸ್.
೧೭	—	ಧೀಪಿಕಾ ಎಂಟರ್‌ಪ್ರೈಸಸ್.
೧೮	—	ರಾಧಾ ಇಂಜಿನಿಯರಿಂಗ್ ಕಾರ್ಪೋರೇಷನ್.
೧೯	—	ಅಸೋಸಿಯೇಟೆಡ್ ಪಂಪ್ ಇಂಜಿನಿಯರಿಂಗ್ ಕಂಪನಿ.
೨೦	—	ಡಿ.ಬಿ. ವೀರಣ್ಣ ಅಂಡ್ ಸನ್ಸ್.
೨೧	—	ದೇವಿ ಎಂಟರ್‌ಪ್ರೈಸಸ್.
೨೨	—	ಭಾರತ್ ಇಂಜಿನಿಯರಿಂಗ್ ಕಂಪನಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಪ್ರೊಟೆಕ್ಟೋ ಇಂಜಿನಿಯರಿಂಗ್ ಕಾರ್ಪೊರೇಷನ್ ಲಿಮಿಟೆಡ್‌ನಿಂದ ಸಬ್‌ಮರ್ಸಿಬಲ್ ಪಂಪ್‌ಸೆಟ್ಟುಗಳನ್ನು ಕೊಳ್ಳುವುದಕ್ಕೆ ಕರ್ನಾಟಕ ಆಗ್ರೋ

ಇಂಡಸ್ಟ್ರೀಸ್ ಕಾರ್ಪೊರೇಷನ್ ಅವರಿಗೆ ಅನುಮತಿ ನೀಡಿದ್ದೀರಿ. ಇದು ಎಸ್.ಪಿ.ಡಿ. ನಿಂದ ಅಪ್ರೂವ್ ಆಗಿದೆಯೇ ? ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನ ಜನರಲ್ ಮ್ಯಾನೇಜರ್‌ರವರು ಅವರ ಬ್ರದರ್ ಇನ್‌ಲಾ ಹೆಸರಿನಲ್ಲಿ ಈ ಪ್ರೊಟೆಕ್ಟೋ ಇಂಜಿನಿಯರಿಂಗ್ ಕಾರ್ಪೊರೇಷನ್‌ನಲ್ಲಿ ಡಿಸ್ಟ್ರಿಬ್ಯೂಷನ್ ಷಿಪ್ ಅನ್ನು ತೆಗೆದುಕೊಂಡಿದ್ದಾರೆ. ಅವರು ಒಂದು ಪಂಪ್‌ಸೆಟ್‌ಗೆ ೨ ಸಾವಿರ ರೂಪಾಯಿನಂತೆ ಜಾಸ್ತಿ ಹಣವನ್ನು ತೆಗೆದುಕೊಂಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ರುಜುವಾತು ಮಾಡಲು ನನ್ನ ಹತ್ತಿರ ಸಾಕಷ್ಟು ದಾಖಲಾತಿಗಳಿವೆ. ಆದ್ದರಿಂದ ಒಂದು ಪಂಪ್‌ಸೆಟ್‌ಗೆ ೨ ಸಾವಿರದಂತೆ ಹೆಚ್ಚು ಹಣವನ್ನು ತೆಗೆದುಕೊಂಡಿರುವುದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಈ ಪಂಪ್‌ಸೆಟ್ಟುಗಳನ್ನು ಆಯ್ಕೆ ಮಾಡತಕ್ಕದ್ದು ಕೇವಲ ಪಂಪ್‌ಸೆಟ್ಟುಗಳ ಆಧಾರದಮೇಲೆ ಅಲ್ಲ. ಒಂದೊಂದು ಪಂಪ್‌ಸೆಟ್‌ನಲ್ಲೂ ಒಂದೊಂದು ವೈವಿಧ್ಯತೆ ಇರುತ್ತದೆ. ಆದ್ದರಿಂದ ಬೆಲೆಗಳಲ್ಲೂ ವ್ಯತ್ಯಾಸವಿರುತ್ತದೆ. ಆದರೆ ತಾವು ಹೇಳುವಂತೆ ನಮ್ಮ ಸಂಸ್ಥೆಯಲ್ಲಿರತಕ್ಕವರ ಬಗ್ಗೆ ಅಥವಾ ಪಂಪ್‌ಸೆಟ್ಟುಗಳ ಬಗ್ಗೆ ಯಾವುದೇ ದೂರುಗಳೂ ಬಂದಿಲ್ಲ. ಅಂಥಾ ದೂರುಗಳು ಏನಾದರೂ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಆದರ ಬಗ್ಗೆ ವಿಚಾರಣೆ ಮಾಡಿಸುತ್ತೇನೆ, ಮತ್ತು ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ, ನಾನು ಶಾಸಕನಾಗಿ ಬಹಳ ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ. ನನಗೆ ಈ ವಿಚಾರ ಸ್ಪಷ್ಟವಾಗಿ ಗೊತ್ತಿದೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನ ಜನರಲ್ ಮ್ಯಾನೇಜರ್‌ರವರು ಅವರ ಬ್ರದರ್-ಇನ್-ಲಾ ಹೆಸರಿನಲ್ಲಿ ಪ್ರೊಟೆಕ್ಟೋ ಇಂಜಿನಿಯರಿಂಗ್ ಕಾರ್ಪೊರೇಷನ್‌ನಲ್ಲಿ ಡಿಸ್ಟ್ರಿಬ್ಯೂಷನ್‌ಷಿಪ್‌ನ್ನು ತೆಗೆದುಕೊಂಡು ಒಂದೊಂದು ಪಂಪ್‌ಸೆಟ್‌ಗೂ ಜಾಸ್ತಿ ಹಣವನ್ನು ತೆಗೆದುಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡುತ್ತಿದ್ದಾರೆ. ಡಿ.ಆರ್.ಡಿ.ಎಸ್.ನಲ್ಲೂ ಕೂಡ ಇದೇ ಪಂಪ್‌ಸೆಟ್‌ನ್ನೂ ತೆಗೆದುಕೊಳ್ಳುವಂತೆ ಆರ್ಡರ್ ಮಾಡಿಸಿದ್ದಾರೆ. ಇನ್ನು ಎರಡನೆಯದಾಗಿ ಪ್ರತಿಯೊಂದು ಪಂಪ್‌ಸೆಟ್‌ಗೂ ಯಾವ ಯಾವ ರೇಟನ್ನು ಟೆಂಡರ್‌ನಲ್ಲಿ ತಿಳಿಸಿದ್ದಾರೆಂಬುದನ್ನು ನನಗೆ ತಿಳಿಸಬೇಕು. ಏಕೆಂದರೆ ನಾನೂ ಕೂಡ ಒಬ್ಬ ರೈತ. ನನಗೂ ಅನುಭವ ಇದೆ. ಆದ್ದರಿಂದ ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಸ್ಪಷ್ಟವಾದ ಉತ್ತರವನ್ನು ಕೊಡಬೇಕು.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ನಮ್ಮ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಂದ ಇಂಥಾದ್ದೇ ಪಂಪ್‌ಸೆಟ್‌ನ್ನು ಕೊಂಡುಕೊಳ್ಳಬೇಕೆಂದು ಯಾವುದೇ ಡೈರೆಕ್ಷನ್‌ನ್ನು ಕೊಡತಕ್ಕ ವ್ಯವಸ್ಥೆ ನಮ್ಮಲ್ಲಿಲ್ಲ. ಡಿ ಆರ್.ಡಿ.ಎಸ್.ನವರು ಅಲ್ಲಿನ ರೈತರನ್ನೆಲ್ಲಾ ಕರೆದು ಎಲ್ಲಾ ಪಂಪ್‌ಸೆಟ್‌ಗಳನ್ನೂ ತೋರಿಸಿದನಂತರ ಆ ರೈತರು ತಮಗೆ ಯಾವುದು ಬೇಕೆಂದು ಸೂಚಿಸಂತ್ತಾರೋ ಅದನ್ನೇ ಕೊಂಡುಕೊಳ್ಳತಕ್ಕ ವ್ಯವಸ್ಥೆ ಇದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು,—ತಾವು ಕುಳಿತುಕೊಳ್ಳಿ. ನಾನು ಹೇಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೆ, ನಾಳೆ ನಮ್ಮ ಇಲಾಖೆಯ ಬಗ್ಗೆ ಡಿಮ್ಯಾಂಡ್ ಬರುತ್ತದೆ. ಆ ಸಂದರ್ಭದಲ್ಲಿ ಅವರು ಎಷ್ಟು ಬೇಕಾದರೂ ಮಾತನಾಡಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಸಭಾಧ್ಯಕ್ಷರೆ, ನನ್ನ ಪ್ರಶ್ನೆ ಅದಲ್ಲ...

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ರೈತರ ಬಗ್ಗೆ, ಮಾನ್ಯ ಸದಸ್ಯರ ಕಳಕಳಿ ಏನಿದೆ ಎಂಬುದು ನನಗೆ ಗೊತ್ತಿದೆ. ಇಲ್ಲಿ ಒಂದು ವ್ಯತ್ಯಾಸ ಎಂದರೆ ಒಂದೊಂದು ಸಾರಿ ಉತ್ತಮವಾದ ಪಂಪ್‌ಸೆಟ್‌ಗಳಿಗೆ ಬೆಲೆ ಜಾಸ್ತಿ ಇರುತ್ತದೆ. ಹಿಂದೆ ಕಳಪೆ ದರ್ಜೆಯ ಪಂಪ್‌ಸೆಟ್ಟುಗಳನ್ನು ಸರಬರಾಜು ಮಾಡಿದಾಗ ಅವು ಚೆನ್ನಾಗಿಲ್ಲವೆಂದು ರೈತರಿಂದ ಬಹಳಷ್ಟು ದೂರುಗಳು ಬಂದುವು. ಆದ್ದರಿಂದ ಉತ್ತಮ ದರ್ಜೆಯ ಪಂಪ್‌ಸೆಟ್‌ಗಳನ್ನು ಕೊಂಡುಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. ಆದರೆ ಡಿ.ಆರ್.ಡಿ.ಎಸ್. ನವರು ನಮ್ಮನ್ನು ಕೇಳಬೇಕು, ಇಂಥಾದ್ದನ್ನೇ ಕೊಂಡುಕೊಳ್ಳಬೇಕೆಂದು ನಾವು ಹೇಳಬೇಕೆಂಬ ವ್ಯವಸ್ಥೆ ನಮ್ಮಲ್ಲಿಲ್ಲ. ಇದರಲ್ಲಿ ವ್ಯತ್ಯಾಸ ಏನಾದರೂ ಕಂಡುಬಂದರೆ ತಕ್ಷಣ ಡಿ.ಆರ್.ಡಿ.ಎಸ್.ನವರು ಅಥವಾ ಎಸ್.ಸಿ., ಎಸ್.ಟಿ. ಕಾರ್ಪೊರೇಷನ್‌ನವರು ನಮಗೆ ತಿಳಿಸಬಹುದು,

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ, ನನ್ನ ಪ್ರಶ್ನೆ ಇಷ್ಟೆ.

ಅಧ್ಯಕ್ಷರು.—ನಾನು ನಿಮಗೆ ಅವಕಾಶವನ್ನು ಕೊಡುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಿರ್ದಿಷ್ಟವಾದ ಪ್ರಕರಣವನ್ನು ನಾನು ಹೇಳಿದರೂ ಕೂಡ ನನ್ನನ್ನು ಕೂಡು. ಕೂಡು ಎಂದು ತಾವು ಹೇಳುತ್ತಿದ್ದೀರಿ. ನಿಮ್ಮ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಜನರಲ್ ಮ್ಯಾನೇಜರ್‌ರವರು...

MR. SPEAKER.—Nothing will go on record.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನಗೆ ಏತಕ್ಕೆ ಅವಕಾಶವನ್ನು ಕೊಡುವುದಿಲ್ಲ. ನನ್ನ ಪ ಶ್ನೆ ಏನೆಂದರೆ...

ಅಧ್ಯಕ್ಷರು.—ನೀವು ಈ ರೀತಿ ಮಾಡಿದರೆ I will take serious action against you.

ಶ್ರೀ ಬಿ.ಎಸ್. ಯಡಿಯೂರಪ್ಪ.—ನೀವು ಏನು ಮಾಡುತ್ತೀರೋ ಮಾಡಿ. ನಾನು ಏನು ಹೇಳುತ್ತಿದ್ದೇನೆಂದರೆ, ನಿಮ್ಮ ಕಾರ್ಪೊರೇಷನ್‌ನವರೂ ಮತ್ತು ನಿಮ್ಮ ಅಧಿಕಾರಿಗಳೂ ಸೇರಿಕೊಂಡು ಲಕ್ಷಾಂತರ ರೂಪಾಯಿ ಲೂಟಿ ಮಾಡಿಸಿದ್ದಾರೆ. ನಿಮ್ಮ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನ ಜನರಲ್ ಮ್ಯಾನೇಜರ್‌ರವರು ಅವರ ಬ್ರದರ್-ಇನ್-ಲಾ ಹೆಸರಿನಲ್ಲಿ ಈ ಪ್ರೊಟೆಕ್ಟೋ ಇಂಜಿನಿಯರಿಂಗ್ ಕಾರ್ಪೊರೇಷನ್‌ನಲ್ಲಿ ಬಿಜೆನ್ಸಿಯನ್ನು ತೆಗೆದುಕೊಂಡಿರುವುದು ನಿಜವಾದರೆ ನಿಮ್ಮ ಅಧಿಕಾರಿಯ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಅವರನ್ನು ಮನೆಗೆ ಕಳುಹಿಸುತ್ತೀರಾ ?

SRI H. D. DEVEGOWDA.—He is making a specific allegation against the Government. Whether it is question hour or any other occasion, when a responsible Member makes an allegation against the Government and an officer representing the Government it is the responsiblity of the Government to look into the matter. I only assure the hon. Member the Government will deinitely look into it and probe into the matter and report the matter to the House. I shall request the hon. Member Sri Yediyurappa to pass on what are all the details he has with him in this connection, let him give the details to the Government and the Government will certainly take necessary action and probe into the matter and report the matter to the House.

ಶ್ರೀ ಬಿ. ಎಸ್.. ಯಡಿಯೂರಪ್ಪ,—ಮಾನ್ಯ ಅಧ್ಯಕ್ಷರೇ

ಅಧ್ಯಕ್ಷರು.—೨ ಸಾರಿಗಿಂತ ಹೆಚ್ಚಿಗೆ ಪ್ರಶ್ನೆ ಕೇಳುವುದಕ್ಕೆ ಯಾರಿಗೂ ನಾನು ಅವಕಾಶವನ್ನೇ ಕೊಡುವುದಿಲ್ಲ. ಒಂದು ತಾಸಿನಲ್ಲಿ ಈ ಪ್ರಶ್ನೋತ್ತರ ಮುಗಿಯಬೇಕು. ಈಗಾಗಲೇ ೧೫ ನಿಮಿಷವಾಯಿತು. ಈಗತಾನೇ ೨ನೇ ಪ್ರಶ್ನೆಯನ್ನು ಮುಗಿಸಿ ೩ನೇ ಪ್ರಶ್ನೆಗೆ ನಾವು ಹೋಗುತ್ತಿದ್ದೇವೆ. ಮಾನ್ಯ ಯಡಿಯೂರಪ್ಪನವರೇ ನೀವೇ ಸ್ವಲ್ಪ ತಿಳಿದುಕೊಳ್ಳಬೇಕು. ಎಲ್ಲಾ ಮಾನ್ಯ ಸದಸ್ಯರಿಗೂ ಅವಕಾಶವನ್ನು ನೀಡಬೇಕಾದ್ದು ನನ್ನ ಕರ್ತವ್ಯ. ನಿಮಗೆ ನಾನು ೩ ಸಾರಿ ಪ್ರಶ್ನೆ ಕೇಳುವುದಕ್ಕೆ ಅವಕಾಶವನ್ನು ಕೊಟ್ಟರೆ ಬೇರೆಯವರೂ ಕೂಡ ೩ ಸಾರಿ ಅವಕಾಶ ಕೊಡಿ ಎಂದು ಕೇಳುತ್ತಾರೆ.